ಇರುವುದೆ? ಅಥವಾ ಎಲ್ಲಾ ಜನಪ್ರತಿನಿಧಿಗಳ ವಿಶ್ವಾಸವನ್ನು ತೆಗೆದುಕೊಂಡು ಜಿಲ್ಲೆಯ ಉಸ್ತುವಾರಿ ಯನ್ನು ನೋಡಿಕೊಳ್ಳುವಂಥ ಕೆಲಸವನ್ನು ಮಾಡುವುದೋ? ಇದರ ಬಗ್ಗೆ ಸ್ಪಷ್ಟವಾಗಿ ಇವತ್ತು ಹೇಳಬೇಕು. ಏಕೆಂದರೆ ಉಸ್ತುವಾರಿ ಮಂತ್ರಿಯ ಜವಾಬ್ದಾರಿ ಏನೆಂದರೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಆ ಪ್ರದೇಶದ ಅಭಿವೃದ್ಧಿ ಮಾಡಬೇಕು. ಆದರೆ ನಮ್ಮ ಜಿಲ್ಲೆಯಲ್ಲಿನ ಜನಪ್ರತಿನಿಧಿಗಳ ಸಭೆಯನ್ನು ಕರೆಯುವ ಕೆಲಸ ಇದುವರೆಗೂ ಆಗಿಲ್ಲ. ಆದಕಾರಣ ಭವಿಷ್ಯದಲ್ಲಿ ಉಂಟಾಗ ಬಹುದಾದ ಸಂಘರ್ಷ ತಪ್ಪಿಸಿ, ಸಮಾಜದ ಅಭಿವೃದ್ಧಿ ಆಗಬೇಕಾದರೆ ಈ ಸದನವು ಒಂದು ಲಿಖಿತ ಸುತ್ತೋಲೆಯನ್ನು ಹೊರಡಿಸಿ ಉಸ್ತುವಾರಿ ಸಚಿವರ ಕಾರ್ಯವ್ಯಾಪ್ತಿ ಮತ್ತು ಇತಿಮಿತಿಯ ಬಗ್ಗೆ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತಾ ಪ್ರಥಮವಾಗಿ ಇವತ್ತು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ

(4-00 PM)

ಮಾನ್ಯ ಅಧ್ಯಕ್ಷರಿಗೆ ಹಾಗೂ ನಮ್ಮ ನಾಯಕರಿಗೆ ಮತ್ತು ಸದನದ ಎಲ್ಲ ಸದಸ್ಯರಿಗೂ ಧನ್ಯವಾದಗಳನ್ನು ಸಲ್ಲಿಸುತ್ತ ನಾನು ಮಾತನಾಡಿರುವುದರಲ್ಲಿ ಏನಾದರೂ ಹೆಚ್ಚು ಕಡಿಮೆ ಇದ್ದರೆ ನನ್ನನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತಾ, ಮೊನ್ನೆ ಒಂದು ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ನನ್ನ ಕ್ಷೇತ್ರಕ್ಕೆ ಬಂದಿದ್ದಾರೆ, ವಿಶೇಷವಾಗಿ ಜನರಿಗೆ ಎಲ್ಲ ಸಮಸ್ಯೆಗಳನ್ನು ಪರಿಹರಿಸುವುದಾಗಿ ಭರವಸೆಯನ್ನು ಕೊಟ್ಟಿದ್ದಾರೆ. ಇವತ್ತು ನನ್ನ ಕ್ಷೇತ್ರದ ಜನರು ನನ್ನ ಮುಖಾಂತರ ಸದನದ ನಾಯಕರಾದ ನಿಮ್ಮ ಬಾಯಿಯಿಂದ ಸಿಹಿ ಸುದ್ದಿಯನ್ನು ಕೇಳಲಿಚ್ಛಿಸಿದ್ದಾರೆ. ಆದಕಾರಣ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಒಳ್ಳೆಯ ಸುದ್ದಿ, ಸಿಹಿ ಸುದ್ದಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಾ ಎಲ್ಲರಿಗೂ ನನ್ನ ಧನ್ಯವಾದಗಳನ್ನು ಸಲಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಐವಾನ್ ನಿಗ್ಲಿ : ಮಾನ್ಯ ಅಧ್ಯಕ್ಷರೆ, ಎಲ್ಲರಿಗೂ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ನನಗೆ ಐದು ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು : ನೋಡಿ, ನಿಮಗೆ ಅವಕಾಶ ಕೊಟ್ಟರೆ ಈ ಕಡೆಯಲ್ಲಿ ಇರುವವರು ನಮಗೂ ಕೊಡಿ ಎಂದು ಎಷ್ಟು ಜನರು ಎದ್ದು ನಿಂತುಕೊಳ್ಳುತ್ತಾರೆ ನೋಡಿ. ನಿಮಗೆ ನೆಕ್ಸ್ಟ್ ಟೈಂ ಅವಕಾಶ ಕೊಡುತ್ತೇನೆ. ಈಗ ಕುಳಿತುಕೊಳ್ಳಿ. ಈಗಾಗಲೇ ಆ ಕಡೆಯವರು, ಈ ಕಡೆಯವರು

ಮಾತನಾಡಿಯಾಗಿದೆ. ನಿಮಗೆ ನೆಕ್ಸ್ಟ್ ಟೈಂ ಕೊಡುತ್ತೇನೆ. ಈಗ ಕುಳಿತುಕೊಳ್ಳಿ. ರೇವಣ್ಣನವರೆ, ತಾವು ಈಗ ಉತ್ತರ ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ, ಇಂಧನ ಇಲಾಖೆ ಸಚಿವರು) : ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವಾರದಿಂದ 2007–08ನೇ ಸಾಲಿನ ಮುಂಗಡ ಪತ್ರದ ಮೇಲೆ ಚರ್ಚೆ ನಡೆಯುವಂತಹ ಸಂದರ್ಭದಲ್ಲಿ ನಮ್ಮ ಹಿರಿಯ ಸದಸ್ಯರುಗಳಾದಂತಹ ಮಲ್ಲಿಕಾರ್ಜುನ ಖರ್ಗೆ, ಮಾಧುಸ್ವಾಮಿಯವರಿಂದ ಹಿಡಿದು ಬಸವರಾಜ ರಾಯರೆಡ್ಡಿಯವರು ಹಾಗೂ ಇನ್ನಿತರ ಎಲ್ಲ ಹಿರಿಯ ಸದಸ್ಯರುಗಳು ಲೋಕೋಪಯೋಗಿ ಇಲಾಖೆ ಹಾಗೂ ಇಂಧನ ಇಲಾಖೆಯ ಮೇಲೆ ಮಾತನಾಡಿ ಬೆಳಕು ಚೆಲ್ಲಿದ್ದಾರೆ. ಇದರಲ್ಲಾಗಿರುವಂಥ ಲೋಪ ಅಥವಾ ತಾರತಮ್ಯ, ಇವೆಲ್ಲದರ ಬಗ್ಗೆ ಮಾತನಾಡಿದ್ದಾರೆ. ಇಂದು ಈ ಸಭೆಯ ಮುಂದೆ ನಾನು ಎಲ್ಲರಲ್ಲಿಯೂ ತಮ್ಮ ಮೂಲಕ ಮನವಿ ಮಾಡುವುದೇನೆಂದರೆ, ಇದುವರೆಗೂ ಹಿರಿಯ ಸದಸ್ಯರೆಲ್ಲರೂ ಮಾತನಾಡಿದ್ದನ್ನು ನಾನು ತಾಳ್ಮೆಯಿಂದ ಕೇಳಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಐವಾನ್ ನಿಗ್ಲಿಯವರು ತಮಗೆ ಮಾತನಾಡಲು ಅವಕಾಶ ಕೊಡಲಿಲ್ಲವೆಂದು ಹೇಳುತ್ತಾ ಸಭಾತ್ಯಾಗ ಮಾಡಿದರು).

ಅಧ್ಯಕ್ಷರು : ಮಾನ್ಯ ಸಚಿವರೆ, ನೀವು ಉತ್ತರ ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಎಲ್ಲ ಹಿರಿಯ ಸದಸ್ಯರಲ್ಲಿಯೂ ಮನವಿ ಮಾಡುವುದೇನೆಂದರೆ, ನಾನು ಎಲ್ಲದರ ಬಗ್ಗೆಯೂ ಪೂರ್ಣವಾಗಿ ಹೇಳುವುದಕ್ಕೆ ಅವಕಾಶ ಕೊಡಲಿ. ಆಮೇಲೆ ಅದರ ಮೇಲೆ ಕ್ಲಾರಿಫಿಕೇಶನ್ ಏನಿದ್ದರೂ ಕೇಳಲಿ. ಅದಕ್ಕೆ ನಾನು ಉತ್ತರ ಕೊಡುತ್ತೇನೆ. ಈ ಸಭೆಯ ಮುಂದೆ ಏನೇನು ನಡೆದಿದೆ ಎಂಬ ಬಗ್ಗೆ ಎಲ್ಲ ವಿಚಾರವನ್ನು ಮಂಡಿಸುತ್ತೇನೆ. ಆಮೇಲೆ ಏನು ಕ್ಲಾರಿಫಿಕೇಶನ್ ಇದ್ದರೂ ಉತ್ತರ ಕೊಡಲು ತಯಾರಿದ್ದೇನೆ. ನಾನೇನೂ ಕದ್ದು ಓಡಿಕೋಗುವುದಿಲ್ಲ. ಇಲ್ಲೇ ನಮ್ಮ ಧರ್ಮಸಿಂಗ್ ಸಾಹೇಬರು ಕುಳಿತಿದ್ದಾರೆ. ಅವರು ಎಂಟು ಸಾರಿ ಗೆದ್ದು ಬಂದವರು. ನಾನು ಎರಡು ಬಾರಿ ಗೆದ್ದಿದ್ದೇನೆ, ಒಂದು ಬಾರಿ ಸೋತಿದ್ದೇನೆ. ಮಾನ್ಯ ಖರ್ಗೆ ಸಾಹೇಬರೆ, ನೀವೂ ಅಷ್ಟೆ. ನಿಮ್ಮಷ್ಟು ಅನುಭವ ನನಗೆ ಇಲ್ಲ. ನಿಮ್ಮ ಆಶೀರ್ವಾದ ನನಗೆ ಒಂದಿದ್ದರೆ ಅಷ್ಟೇ ಸಾಕು. ಬಾಕಿಯದ್ದೆಲ್ಲವನ್ನೂ ನಾನು ನೋಡಿಕೊಳ್ಳುತ್ತೇನೆ. ನಾನು ಇಂದು ಮೊದಲನೆಯದಾಗಿ